

# ಒಂದು ಕೆಟ್ಟ ಶುಕ್ರವಾರ...

ಸೋಲು ಮತ್ತು ಗೆಲುವು ಎರಡನ್ನೂ ಒಂದೇ ತಕ್ಕಡಿಯಲ್ಲಿ ತೂಗುವ ಜಾಯಮಾನ ತನ್ನದು ಎನ್ನುತ್ತಾಳೆ ತಾಪಸಿ ಪನ್ನು. ತೆಲುಗು ಮತ್ತು ತಮಿಳಿನಲ್ಲಿ ಮಿಂಚುವ ತಾಪಸಿ, ಆಗಾಗ ಬಾಲಿವುಡ್‌ನ ರಂಗಿನಲ್ಲೂ ಓಕುಳಿಯಾಡಿ ಬರುತ್ತಾಳೆ. ಎರಡೂ ಕಡೆ ನಿರಂತರ ಯಶಸ್ಸು ಕಾಣುತ್ತಿರುವ ತಾಪಸಿ ಈಗ 'ರನ್ನಿಂಗ್ ಶಾದಿ ಡಾಟ್ ಕಾಂ' ಎಂಬ ಚಿತ್ರಕ್ಕೆ ಬಣ್ಣ ಹಚ್ಚುತ್ತಿದ್ದಾಳೆ. 'ಚಷ್ಮೆ ಬದ್ದೂರ್','ಬೇಬಿ', 'ಪಿಂಕ್'ನಂತಹ ಚಿತ್ರಗಳು ತಾಪಸಿಗೆ ಉತ್ತಮ ಐಡೆಂಟಿಟಿ ತಂದುಕೊಟ್ಟಿವೆ. ಹೀಗಿದ್ದರೂ ಆಕೆ ತನ್ನನ್ನು ಆತ್ಮ ವಿಮರ್ಶೆಗೆ ಒಡ್ಡಿಕೊಳ್ಳುತ್ತಾಳೆ. ಈ ಎಲ್ಲ ಯಶಸ್ಸು ದಕ್ಕುವ ಮುನ್ನ ದಕ್ಷಿಣದ ಸಿನಿಮಾಗಳಲ್ಲಿ ದೊಡ್ಡ ಮಟ್ಟದ ಗೆಲುವು ಮತ್ತು ಸೋಲು ಎರಡನ್ನೂ ಸಮಾನವಾಗಿ ಅನುಭವಿಸಿದ್ದಾಗಿ ಹೇಳುತ್ತಾಳೆ. ರಾತ್ರೋ ರಾತ್ರಿ 'ಸ್ಟಾರ್' ಆಗಿ ಬಿಡುವುದು ಮತ್ತು ಸೋತಾಗ ಒಮ್ಮೆಲೆ ತಿರಸ್ಕಾರದಿಂದ ನೋಡುವುದು ಎರಡನ್ನೂ ಆಕೆ ಸಮಾನವಾಗಿ ಅನುಭವಿಸಿದ್ದಾಳಂತೆ. ಒಂದು ಕೆಟ್ಟ ಶುಕ್ರವಾರ (ಸಿನಿಮಾ ಬಿಡುಗಡೆಯಾಗುವ ದಿನ) ಜನರು ತಮ್ಮನ್ನು ನೋಡುವ ರೀತಿಯೇ ಬದಲಾಗುತ್ತದೆ ಎನ್ನುತ್ತಾಳೆ ತಾಪಸಿ. ಈ ಏರಿಳಿತದ ಅನುಭವವನ್ನು ಈಗ ಉಪಯೋಗಿಸಿಕೊಳ್ಳುತ್ತಿದ್ದಾಳೆ.

'ನನ್ನ ವೈಯಕ್ತಿಕ ಬದುಕು ಸಿನಿಮಾಗಳಾಚೆಗಿನದ್ದು. ಅದನ್ನು ಹಾಗೆಯೇ ನಿಭಾಯಿಸುತ್ತೇನೆ. ಸಿನಿಮಾಗಳು ನನ್ನ ಬದುಕಿನ ಒಂದು ಭಾಗವಷ್ಟೇ. ನನ್ನ ಇಡೀ ಜೀವನವನ್ನು ನಟನೆಗೆ ಮುಡಿಪಿಡಲು ಸಾಧ್ಯವಿಲ್ಲ. ನನ್ನ ವೃತ್ತಿಯೂ ನನ್ನ ಜೀವನದ ಭಾಗವಲ್ಲ. ಅದರಾಚೆಗೆ ಅನೇಕ ಸಂಗತಿಗಳಿವೆ. ಬಹುಶಃ ಈ ಕಾರಣದಿಂದಲೇ ಸ್ಟಾರ್‌ಡಮ್ ಎನ್ನುವುದನ್ನು ನಾನು ದೂರವೇ ಇರಿಸಿದ್ದೇನೆ' ಎಂದಿದ್ದಾಳೆ ಈ ಸುಂದರಿ. 'ಚಿತ್ರರಂಗದಲ್ಲಿ ಪ್ರತಿನಿತ್ಯವೂ ನಾವು ಆಕರ್ಷಣೆಯ ಕೇಂದ್ರ ಬಿಂದು ಎಂಬುದನ್ನು ನೆನಪಿಸುವ ಜನರ ಗುಂಪು ಇರುತ್ತದೆ. ಹೀಗಾಗಿ ಅದರಿಂದ ಕಳಚಿಕೊಳ್ಳುವುದು ಬಹಳ ಕಷ್ಟ. ಆದರೆ ಸಿನಿಮಾ ಸೋತ ಒಂದು ಕೆಟ್ಟ ಶುಕ್ರವಾರ ಇದೇ ಜನರು ನಮ್ಮ ಜೊತೆ ಮತ್ತೆ ಮಾತನಾಡಲು ಬಯಸುವುದಿಲ್ಲ' ಎಂದು ಬದಲಾಗುವ ಜನರ ಮನೋಭಾವವನ್ನು ತೀಕ್ಷ್ಣವಾಗಿ ಟೀಕಿಸಿದ್ದಾಳೆ.

# ತೆರೆಗೆ ಲೋಗಾನ್

ಹಾಲಿವುಡ್‌ನ ಎಕ್ಸ್–ಮೆನ್ ಸರಣಿ ಸಿನಿಮಾಗಳೆಂದರೆ ಮೈನವಿರೇಳಿಸುವ ರೋಚಕ ಸಾಹಸಮಯಕ್ಕೆ ಹೆಸರುವಾಸಿ. ಈ ಸರಣಿಯ ಭಾಗವಾಗಿಯೇ ಹುಟ್ಟಿಕೊಂಡ ಮತ್ತೊಂದು ಸರಣಿ 'ವೋಲ್ವರಿನ್'. 'ಎಕ್ಸ್ ಮ್ಯಾನ್ ಒರಿಜಿನ್ಸ್: ವೋಲ್ವರಿನ್ (2009) ಮತ್ತು ದಿ ವೋಲ್ವರಿನ್ (2013) ಚಿತ್ರಗಳು ಯಶಸ್ಸು ಕಂಡಿದ್ದವು. ಈ ಸರಣಿಯ ಮೂರನೇ ಹಾಗೂ ಕೊನೆಯ ಸಿನಿಮಾ (ಎಕ್ಸ್–ಮೆನ್ ಸರಣಿಯ 10ನೆಯದು) 'ಲೋಗಾನ್' ಈ ವಾರ ತೆರೆ ಕಾಣುತ್ತಿದೆ. ವೋಲ್ವರಿನ್ ಕಥೆಗಳು ಜನ್ಮತಾಳಿದ್ದು 1980ರ ದಶಕದ ಜನಪ್ರಿಯ ಕಾಮಿಕ್ ಸರಣಿಗಳ ಮೂಲಕ.






'ದಿ ವೋಲ್ವರಿನ್' ಚಿತ್ರದ ನಟನೆಗೆ ಆಸ್ಕರ್ ಅಕಾಡೆಮಿ ಪ್ರಶಸ್ತಿಗೆ ನಾಮನಿರ್ದೇಶನಗೊಂಡಿದ್ದ ನಟ ಹ್ಯೂಜ್ ಜಾಕ್‌ಮ್ಯಾನ್ ಈ ಆವೃತ್ತಿಗೂ ನಾಯಕ. ಜೇಮ್ಸ್ ಮಾಂಗೋಲ್ಡ್ ನಿರ್ದೇಶನದ ಈ ಚಿತ್ರ 2029ರ ಕಥೆ ಹೇಳಲಿದೆ. ಹೊರಜಗತ್ತಿನಿಂದ ದೂರವಿದ್ದು ಬದುಕುತ್ತಿರುವ ಲೋಗಾನ್, ಮೆಕ್ಸಿಕನ್ ಗಡಿಯ ಅಡಗುದಾಣದಲ್ಲಿ ಕದ್ದುಮುಚ್ಚಿ ಜೀವಿಸುತ್ತಿದ್ದಾನೆ. ಆತನ ಸಹವರ್ತಿಗಳಾದ ಕ್ಯಾಲಿಬನ್ ಮತ್ತು ಚಾರ್ಲ್ಸ್ ಕ್ಸೇವಿಯರ್ ಇಬ್ಬರೂ ಗಡೀಪಾರಾಗಿದ್ದಾರೆ. ಜಗತ್ತಿನ ಕಣ್ಣಿಗೆ ಬೀಳದೆ ಬಚ್ಚಿಟ್ಟುಕೊಂಡು ಬದುಕುವ ಲೋಗಾನ್‌ನ ಉದ್ದೇಶಕ್ಕೆ ಅಡ್ಡಿಯಾಗುವುದು ಲಾರಾ ಎಂಬ ಯುವತಿ. ಕೊಲೆಗಾರನೊಬ್ಬನಿಂದ ಆಕೆಯನ್ನು ಕಾಪಾಡುವ ಲೋಗಾನ್, ಆಕೆಗೆ ಆಶ್ರಯ ನೀಡುವ ಅನಿವಾರ್ಯತೆಗೆ ಸಿಲುಕುತ್ತಾನೆ. ಇದು ಕರಾಳ ಜಗತ್ತಿನೊಂದಿಗೆ ಮುಖಾಮುಖಿಯಾಗುವ ಸನ್ನಿವೇಶ ಸೃಷ್ಟಿಸುತ್ತದೆ. ಈ ಹಂತದಲ್ಲಿ ಆತನ ಹಳೆಯ ವೈರಿಯೂ ಎದುರಾಗುತ್ತಾನೆ. ಈ ಸವಾಲುಗಳನ್ನು ಲೋಗಾನ್ ಹೇಗೆ ಎದುರಿಸುತ್ತಾನೆ ಎನ್ನುವುದು ಚಿತ್ರದ ಸಾರಾಂಶ. ಜಾನ್ ಮಥೀಸನ್ ಛಾಯಾಗ್ರಹಣ, ಮಾರ್ಕೊ ಬೆಲ್ಟ್ರಮಿ ಸಂಗೀತ ಚಿತ್ರಕ್ಕಿದೆ. ಸ್ಟೀಫನ್ ಮರ್ಚೆಂಟ್, ಡಾಫ್ನಿ ಕೀನ್, ಬಾಯ್ಡ್ ಹೊಲ್ಬ್ರೂಕ್ ಮುಂತಾದವರು ನಟಿಸಿದ್ದಾರೆ. 135 ನಿಮಿಷದ ಅವಧಿಯ ಈ ಸಿನಿಮಾ ಇಂಗ್ಲಿಷ್ ಜತೆಗೆ ತಮಿಳು ಮತ್ತು ತೆಲುಗು ಭಾಷೆಗಳಲ್ಲಿಯೂ ಬಿಡುಗಡೆಯಾಗುತ್ತಿದೆ.

■ ಅಮಿ